ಎರಡನೇ **ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No.790/2021

CW -6 PW - 4

| | | |
|---|---|---|
| ಹೆಸರು | ಃ | ವಿಶ್ವನಾಥ್ |
| ತಂದೆಯ ಹೆಸರು | ಃ | ನಾಗರಾಜು |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | HC |
| ವಾಸ | ಃ | ರಾಮನಗರ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 06.08.2024

ನಾನು 28.01.2021 ರಿಂದ 08.08.2021 ರವರೆಗೆ ಮುಖ್ಯ ಪೇದೆಯಾಗಿ ಕನಕಪುರ ಗ್ರಾಮಾಂತರ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತೇನೆ .

ದಿಃ09.06.2021 ರಂದು ಚಾಸಾ-1 ರವರಿಗೆ ಆನುಮಾನಹಳ್ಳಿ ಲಿಂಗರಾಜು ರವರು ಸರ್ಕಾರದ ಕೋವಿಡ್ ಆದೇಶವನ್ನು ಉಲ್ಲಂಘಿಸಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ನನ್ನನ್ನು ಮತ್ತು ಚಾಸಾ-2 ರಿಂದ 5 ರವರನ್ನು ಅವರ ಕೊಠಡಿಗೆ ಬರಮಾಡಿಕೊಂಡು, ಆನುಮಾನಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟಮಾಡುತ್ತಿದ್ದಾರೆಂಬ ಮಾಹಿತಿ ಬಂದಿದ್ದು, ಧಾಳಿ ಮಾಡಬೇಕಾಗಿರುತ್ತದೆ ತಾವುಗಳು ಪಂಚರಾಗುವಂತೆ ಕೋರಿದ್ದು, ನಾವು ಒಪ್ಪಿದ ಮೇರೆಗೆ ಕೆಎ-42-ಜಿ-923 ಸರ್ಕಾರಿ ವಾಹನದಲ್ಲಿ ಆನುಮಾನಹಳ್ಳಿ ಗ್ರಾಮಕ್ಕೆ ಹೋಗಿ, ಆರೋಪಿಯ ಅಂಗಡಿ ಮತ್ತು ಮನೆಯಿಂದ 100 ಮೀ ಟರ್ ದೂರದಲ್ಲಿ ನಿಂತು ನೋಡಲಾಗಿ ಆರೋಪಿ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ನಾವು ಧಾಳಿ ಮಾಡಲು ಹೋದಾಗ ಸಮವಸ್ತ್ರದಲ್ಲಿ ನಮ್ಮನ್ನು ನೋಡಿ ಆರೋಪಿ ಅಲ್ಲಿಂದ ಓಡಿ ಹೋಗಿರುತ್ತಾನೆ.

ನಂತರ ಅಂಗಡಿಯ ಹತ್ತಿರ ಹೋಗಿ ನೋಡಲಾಗಿ ಮದ್ಯದ ಚೀಲ ಕಂಡು ಬಂದಿದ್ದು, ಅದರಲ್ಲಿ MC Dowells Indian Brandy 90 ml 40 Sachet ಗಳು, ಪ್ರತಿ ಸ್ಯಾಚೆಟ್ ನ ಬೆಲೆ 87.55 ಪೈಸೆ ಆಗಿರುತ್ತದೆ. ಅದರ ಒಟ್ಟು ಮೌಲ್ಯ 3502 ರೂ. ಆಗಿರುತ್ತದೆ. 3 ಲೀಟರ್ 600 ಎಂಎಲ್ ಇರುತ್ತದೆ. Old Tavern Whisky 90 ml 21 ಸ್ಯಾಚೆಟ್ ಗಳು ಇದ್ದು, ಪ್ರತಿ ಸ್ಯಾಚೆಟ್ ನ ಬೆಲೆ 53.12 ಪೈಸೆ ಆಗಿರುತ್ತದೆ. ಅದರ ಒಟ್ಟು ಮೌಲ್ಯ 1115 ರೂ. ಆಗಿರುತ್ತದೆ. 1 ಲೀಟರ್ 890 ಎಂಎಲ್ ಇರುತ್ತದೆ. ಒಟ್ಟು ಮದ್ಯ 5,490 ಎಂ ಎಲ್ ಆಗಿರುತ್ತದೆ. ಅದರ ನಿವ್ವಳ ಮೌಲ್ಯ 4617 ರೂ ಆಗಿರುತ್ತದೆ.

ಅದರಲ್ಲಿ ತಲಾ ಒಂದೊಂದನ್ನು ತೆಗೆದು FSL ಗೆ ಕಳುಹಿಸಲು ಬಿಳಿ ಬಟ್ಟೆಯಲ್ಲಿ ಸುತ್ತಿ ಎಸ್ ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತದೆ. ಸದರಿ ಸ್ಥಳದ ಚಕ್ಕಬಂಧಿ ಪೂರ್ವಕ್ಕೆ ಆರೋಪಿ ಮನೆ, ಪಶ್ಚಿಮಕ್ಕೆ ಬೈರೇಗೌಡರ ಮನೆ, ಉತ್ತರಕ್ಕೆ ಸರ್ಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ಬೋಳೇಗೌಡರ ಖಾಲಿ ನಿವೇಶನ ಇರುತ್ತದೆ. ಸ್ಥಳದಲ್ಲಿ 12.00 ರಿಂದ 1.00 ಗಂಟೆಯವರೆಗೆ ಬರೆದ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಅಮಾನತ್ತು ಪಡಿಸಿಕೊಂಡ ಮದ್ಯದೊಂದಿಗೆ ಠಾಣೆಗೆ ಬಂದಿರುತ್ತೇವೆ.

ಸಾಕ್ಷಿಯು ನಿಪಿ-1 ರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು. ಮು.ಮಾ. 1 ರಿಂದ ಮು.ಮಾ. 3 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ</u>**

ಮಾಹಿತಿ ಬಂದಾಗ ನಾನು ಗ್ರಾಮಾಂತರ ಠಾಣೆಯಲ್ಲಿದ್ದೆ. ಚಾಸಾ-1 ರವರು 11.45 ಗಂಟೆಗೆ ವಿಚಾರ ತಿಳಿಸಿದರು. ಆನುಮಾನಹಳ್ಳಿಗೆ ಹೋದಾಗ 12.00 ಗಂಟೆ ಯಾಗಿತ್ತು. ನಾವು ಒಟ್ಟು 7 ಜನ ಸ್ಥಳಕ್ಕೆ ಹೋದೆವು. ನಾವು 100 ಮೀಟರ್ ದೂರದಲ್ಲಿ ಸ್ವಲ್ಪ ಸಮಯ ಕಾದು ನಂತರ ಧಾಳಿ ಮಾಡಿದೆವು. ನಾವು ನಿಂತಿದ್ದ ಸ್ಥಳದ ಹತ್ತಿರ ಮನೆಗಳು ಇದ್ದವು. ನಾವು ಸಮವಸ್ತ್ರದಲ್ಲಿ ಹೋಗಿದ್ದೆವು. ಸಮವಸ್ತ್ರದಲ್ಲಿ ಪೋಲಿಸರು ಹೋದಾಗ ಸಾಮಾನ್ಯವಾಗಿ ಜನರು ಸೇರುತ್ತಾರೆ ಎಂದರೆ ಸರಿ. ಸುಮಾರು ಜನ ಅಲ್ಲಿ ಸೇರಿದ್ದರು. ನಾವು ಧಾಳಿ ಮಾಡಿದ ಸ್ಥಳದ ಪೋಟೋ ಪಡೆದಿಲ್ಲ. ನಾವು ಧಾಳಿ ಮಾಡಿದ ಗ್ರಾಮದಲ್ಲಿನ ಜನರನ್ನು ಸಾಕ್ಷಿ ಮಾಡಿಕೊಂಡಿಲ್ಲ. ಸದರಿ ಸ್ಥಳದ ಚಕ್ಕುಬಂಧಿಯ ಬಗ್ಗೆ ಗ್ರಾಮಸ್ಥರಲ್ಲಿ ವಿಚಾರಿಸಿದ್ದೆವು. ಅವರ ಹೇಳಿಕೆಯನ್ನು ಪಡೆದಿರುವುದಿಲ್ಲ. ಮು.ಮಾ. 1 ರಿಂದ 3 ರ ಮೇಲೆ ನನ್ನ ಸಹಿ ಇಲ್ಲ. ಆನುಮಾನಹಳ್ಳಿ ಯಲ್ಲಿ ಎಷ್ಟು ಪ್ರಕರಣ ಆ ದಿನ ದಾಖಲು ಮಾಡಿದೆವು ಎಂದು ನನಗೆ ಗೊತ್ತಿಲ್ಲ. ಧಾಳಿ ಜಾಗದ ವಿಸ್ತೀರ್ಣ ವನ್ನು ನನಗೆ ಹೇಳಲು ಸಾಧ್ಯವಿಲ್ಲ. ಕಲ್ಲಹಳ್ಳಿಯಿಂದ ಆನುಮಾನಹಳ್ಳಿಗೆ 4 ಕಿ ಮೀ ಅಂತರವಿರಬಹುದು.ನಾವು ಅಲ್ಲಿಂದ 1 ಗಂಟೆಗೆ ಠಾಣೆಗೆ ಹೊರಟೆವು. ನಾವು ನೇರವಾಗಿ ಠಾಣೆಗೆ ಬಂದಿರುತ್ತೇವೆ. ನಾವು ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ಧಾಳಿ ಮಾಡಿಲ್ಲ, ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗಡಿಯ ಬಗ್ಗೆ

ಮಾಹಿತಿಗಳನ್ನು ಅವತ್ತು ಪಡೆದಿರುವುದಿಲ್ಲ. ಸ್ಥಳದಲ್ಲಿ ಯಾವುದೇ ಅಂಗಡಿ ಇರಲಿಲ್ಲ , ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಏನೂ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ